# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ನಿಗಮ ಕಛೇರಿ, No.927, ಎಲ್.ಜೆ. ಅವೆನ್ಯೂ ಕಮರ್ಷಿಯಲ್ ಕಾಂಪ್ಲೆಕ್ಸ್,
ನ್ಯೂ ಕಾಂತರಾಜ ಅರಸ್ ರಸ್ತೆ, ಸರಸ್ವತಿ ಪುರಂ, ಮೈಸೂರು-570009 CIN : U40109KA2004SGC035177

Website : www.cescmysore.org

ಸಹಾಯಕ ಕಾರ್ಯ ನಿರ್ವಾಹಕಇಂಜನಿಯರ್(ವಿ),
ನ.ರಾ.ಮೊಹಲ್ಲಾ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.

ದೂರವಾಣಿ :
ಕಛೇರಿ ಸಂಖ್ಯೆ : 0821-2456201
ಮೊಬೈಲ್ : 9448994742


ಕ್ರಮ.ಸಂಖ್ಯೆ :ಸಕಾಇಂ(ವಿ)/ಸಇಂ(ತಾ)/ನರಾಮೊ/17-18/ ದಿನಾಂಕ :

## ಜನ ಸಂಪರ್ಕ ಸಭೆ ನಡಾವಳಿ

ದಿನಾಂಕ 14.11.2017 ರಂದು ಬೆಳಿಗ್ಗೆ 11.00 ಗಂಟೆಗೆ **ಅಧೀಕ್ಷಕ ಇಂಜಿನಿಯರ್** (ವಿ) ಕಾ ಮತ್ತು ಪಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಎನ್.ಆರ್.ಮೊಹಲ್ಲಾ ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

1. ಶ್ರೀ ನರಸಿಂಹೇಗೌಡ ಎನ್, ಅಧೀಕ್ಷಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವೃತ್ತ, ಮೈಸೂರು
2. ಶ್ರೀ ಸೋಮಶೇಖರ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ವಿಭಾಗ
3. ಶ್ರೀ ಎಹಸಾನ್ ಉಲ್ಲಾ ಹಕ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ಉಪವಿಭಾಗ.
4. ಶ್ರೀ ನೀಲಶೆಟ್ಟರು, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವರುಣಾ ಉಪವಿಭಾಗ.
5. ಶ್ರೀ ವೈ.ಸಿ.ನಿತೇಶ್, ಸಹಾಯಕ ಇಂಜಿನಿಯರ್(ವಿ), ಸಿದ್ದಲಿಂಗಪುರ ಶಾಖೆ
6. ಶ್ರೀ ಗಿರೀಶ್.ಪಿ, ಸಹಾಯಕ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
7. ಶ್ರೀ ಬಸವರಾಜು, ಕಿರಿಯ ಇಂಜಿನಿಯರ್(ವಿ), ಮೆಲ್ಲಹಳ್ಳಿ ಶಾಖೆ.
8. ಶ್ರೀಮತಿ ಸುನೀತಾ, ಕಿರಿಯ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.

ಅಧೀಕ್ಷಕ ಇಂಜಿನಿಯರ್(ವಿ), ರವರು ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು ಮತ್ತು ವಿದ್ಯುತ್ ಗ್ರಾಹಕರುಗಳನ್ನು ಸಭೆಗೆ ಸ್ವಾಗತಿಸಿದರು. ದಿನಾಂಕ 23.08.2017 ರಂದು ನಡೆದಿದ್ದ ಜನ ಸಂಪರ್ಕ ಸಭೆಯಲ್ಲಿ ಬಂದಿದ್ದ ದೂರಗಳ ಬಗ್ಗೆ ಕೈಗೊಂಡಿರುವ ಕ್ರಮದ ಮಾಹಿತಿಯನ್ನು ಪಡೆದು ಗ್ರಾಹಕರಿಗೆ ವಿದ್ಯುತ್ ಸಂಬಂಧಿತ ಯಾವುದೇ ದೂರಗಳು ಇದ್ದರೆ ಈ ಸಭೆಯಲ್ಲಿ ತಿಳಿಸುವಂತೆ ಕೋರಿದರು.

ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.

1. ವಿದ್ಯುತ್ ಗುತ್ತಿಗೆದಾರರು, ಎನ್.ಆರ್.ಮೊಹಲ್ಲಾ ಉಪವಿಭಾಗದಲ್ಲಿ ಹಣ ಪಾವತಿಸಲು ಕೌಂಟರ್‌ನ್ನು ತೆರೆಯಲು ಅನುವು ಮಾಡಿಕೊಡುವಂತೆ ಕೋರಿದರು. ಈ ಸಂಬಂಧ ಅಧೀಕ್ಷಕ ಇಂಜನಿಯರ್(ವಿ) ರವರು ಎನ್.ಆರ್.ಮೊಹಲ್ಲಾ ಶಾಖೆಯಲ್ಲಿ ಎ.ಟಿ.ಪಿಯನ್ನು ತೆರೆದ ನಂತರ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ನಗದು ಕೌಂಟರ್‌ನ್ನು ಉಪವಿಭಾಗದಲ್ಲಿ ಕಾರ್ಯನಿರ್ವಹಿಸಲು ಸೂಚಿಸಿದರು.
2. ಶ್ರೀ ಬಾಬು ರವರು ಈ ಹಿಂದಿನ ಸಭೆಯಲ್ಲಿ ನೀಡಿ ದೂರ್ಸ್ವಿಯ ಕೆಲಸವನ್ನು ನಿರ್ವಹಿಸಿದಕ್ಕೆ ಧನ್ಯವಾದವನ್ನು ತಿಳಿಸಿ, ಇಲಿಯಾಜ್ ಮಸೀದಿ ಮುಂಭಾಗ ರಸ್ತೆ ಮಧ್ಯದಲ್ಲಿರುವ ಕಂಬಗಳನ್ನು ರಸ್ತೆಯ ಪಕ್ಕಕ್ಕೆ ಬದಲಾಯಿಸಲು ಕೋರಿದರು. ಈ ಸಂಬಂಧ ಅಧೀಕ್ಷಕ ಇಂಜನಿಯರ್(ವಿ) ರವರು ರಸ್ತೆ ಅಗಲ ಮಾಡುವ ಸಮಯಲ್ಲಿ ಸಂಬಂಧಪಟ್ಟ ಮೈಸೂರು ಮಹಾನಗರ ಪಾಲಿಕೆರವರು ಕಾಮಗಾರಿ ಪ್ರಾರಂಬಿಸುವ ಮೊದಲು ರಸ್ತೆಯ ಮಧ್ಯದಲ್ಲಿರುವ ವಿದ್ಯುತ್ ಕಂಬಗಳನ್ನು ರಸ್ತೆಯ ಪಕ್ಕಕ್ಕೆ ಸ್ಥಳಾಂತರಿಸಿ ರಸ್ತೆಯ ಕಾಮಗಾರಿಯನ್ನು ನಿರ್ವಹಿಸ ಬೇಕಾಗಿರುತ್ತದೆ. ಆದ್ದರಿಂದ ಸದರಿ ಕಂಬಗಳನ್ನು ಸ್ಥಳಾಂತರಿಸಲು ಮೈಸೂರು ಮಹಾನಗರ ಪಾಲಿಕೆಯವರಿಂದ ಸ್ಥಳಾಂತರಿಸಲು ತಗಲುವ ವೆಚ್ಚವನ್ನು ಭರಿಸಿದ ನಂತರ ಸದರಿ ಕಂಬಗಳನ್ನು ಸ್ಥಳಾಂತರಿಸಲಾಗುತ್ತಿತ್ತು ಎಂಬ ಮಾಹಿತಿಯನ್ನು ನೀಡಿದರು. ಸದರಿ ಕಾಮಗಾರಿಯು ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ನಿರ್ಧಿಷ್ಟ ಶುಲ್ಕ ಪಾವತಿಸದ ನಂತರ ಕೆಲಸ ನಿರ್ವಹಿಸಲಾಗುವುದು ಎಂದು ತಿಳಿಸಿದರು.
3. ಶ್ರೀ ಬಾಬು ರವರು ಕೆಸರೆ, ಬೆಲವತ್ತದಲ್ಲಿರುವ 1 ರಿಂದ 8ನೇ ಅಡ್ಡ ರಸ್ತೆಯಲ್ಲಿ ಶಿಥಿಲಗೊಂಡ ವಿದ್ಯುತ್ ಕಂಬಗಳನ್ನು ಬದಲಾಯಿಸಲು ಕೋರಿದರು. ಈ ಸಂಬಂಧ ಅಧೀಕ್ಷಕ ಇಂಜನಿಯರ್(ವಿ) ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ರವರಿಗೆ ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ಸೂಚಿಸಿದರು.
4. ಶ್ರೀ ಅಶ್ವತ ನಾರಾಯಣ ರವರು ಸ್ಥಾವರಗಳ ಖಾತಾ ಬದಲಾವಣೆಗೆ ಸಂಬಂಧಿಸಿದಂತೆ ಅವಶ್ಯ ಇರುವ ದಾಖಲೆಗಳನ್ನು ಸೂಚನಾ ಫಲಕಗದಲ್ಲಿ ನಮೂಧಿಸಲು ಕೋರಿದರು. ಈ ಸಂಬಂಧ ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ರವರು ಕಂದಾಯ ಶಾಖೆ ಸಹಾಯಕ ಲೆಕ್ಕಾಧಿಕಾರಿಯವರಿಗೆ ಕ್ರಮಕೈಗೊಳ್ಳಲು ಸೂಚಿಸಿದರು.
5. ಶ್ರೀ ಚಂದ್ರಶೇಖರ್‌ರವರು 2ನೇ ಕ್ರಾಸ್ ರಾಜೇಂದ್ರನಗರದಲ್ಲಿ ಹೊಸದಾಗಿ ವಿದ್ಯುತ್ ಪರಿವರ್ತಕವನ್ನು ಅಳವಡಿಸಿದ್ದು, ಪದೇ ಪದೇ ಅಡಚಣೆ ಉಂಟಾಗಿತ್ತಿದ್ದು, ಇದರ ಎಂ.ಸಿ.ಬಿ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ದೂರಿದರು. ಈ ಸಂಬಂಧ ಅಧೀಕ್ಷಕ ಇಂಜನಿಯರ್(ವಿ) ರವರು ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ರವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದರು.
6. ಶ್ರೀ ಪ್ರದೀಪ್ ಚಂದ್ರರವರು ಸುಭಾಷ್‌ನಗರದ ಅಮ್ಮ ಬೇಕರಿ ಹತ್ತಿರ ಎಲ್.ಟಿ ಮಾರ್ಗದ ವಿದ್ಯುತ್ ವಾಹಕವು ಜೋತು ಬಿದ್ದು, ಕ್ರಮವಹಿಸುವಂತೆ ಕೋರಿದರು. ಈ ಬಗ್ಗೆ ಅಧೀಕ್ಷಕ ಇಂಜನಿಯರ್(ವಿ), ಸಂಬಂಧಪಟ್ಟ ಎನ್.ಆರ್.ಮೊಹಲ್ಲಾ ಶಾಖಾಧಿಕಾರಿ ಶ್ರೀ ಶ್ರೀನಿವಾಸ್ ರವರಿಗೆ ಖುದ್ದು ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ಸೂಚಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ)
ಎನ್.ಆರ್.ಮೊಹಲ್ಲಾ ಉಪ-ವಿಭಾಗ
ಚಾ.ವಿ.ಸ.ನಿ.ನಿ. ಮೈಸೂರು.

ಪ್ರತಿಗಳು:-

- ಮುಖ್ಯಇಂಜನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕಇಂಜನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕಇಂಜನಿಯರ್ (ವಿ),ಚಾವಿಸನಿನಿ., ಎನ್.ಆರ್.ಮೊಹಲ್ಲಾ, ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು, ಎನ್.ಆರ್.ಮೊಹಲ್ಲಾ/ಬನ್ನಿಮಂಟಪ/ಮೆಲ್ಲಹಳ್ಳಿ/ಸಿದ್ದಲಿಂಗಪುರ, ರವರುಗಳು ಮೇಲ್ಕಂಡ ದೂರಗಳನ್ವಯ ಸ್ಥಳಪರಿಶೀಲಿಸಿ ಉಪವಿಭಾಗ ಕಛೇರಿಗೆ ವರದಿ ನೀಡುವುದು.
- ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ.